# ಹರಿಕಥಾಮೃತಸಾರ - ೦೪
## ಭೋಜನರಸವಿಭಾಗ ಸಂಧಿ

ಹರಿಕಥಾಮೃತಸಾರ ಗುರುಗಳ । ಕರುಣದಿಂದಾಪನಿತು ಪೇಳುವೆ ।
ಪರಮ ಭಗವದ್ಭಕ್ತರಿದನಾದರದಿ ಕೇಳುವುದು ॥

ವನಜಜಾಂಡದೊಳುಳ್ಳಖಿಳ ಚೇ।ತನರು ಭುಂಜಿಪ ಚತುರವಿಧಭೋ ।
ಜನಪದಾರ್ಥದಿ ಚತುರ ವಿಧ ರಸರೂಪ ತಾನಾಗಿ ॥
ಮನಕೆ ಬಂದುದನುಂಡುಣಿಸಿ ಸಂ।ಹನನಕುಪಚಯ ಕರಣಕಾನಂ ।
ದನಿಮಿಷರಿಗಾತ್ಮ ಪ್ರದರ್ಶನ ಸುಖನೀವಹರಿ ॥ ॥೦೪-೦೧॥

ನೀಡದಂದಲಿಪ್ಪ ಲಿಂಗಕೆ । ಷೋಡಶಾತ್ಮಕ ರಸವಿಭಾಗವ ।
ಮಾಡಿ ಷೋಡಶ ಕಲೆಗಳಿಗೆ ಉಪಚಯಗಳನೆ ಕೊಡುತ ॥
ಕ್ರೋಡ ಎಪ್ಪತ್ತೆರಡು ಸಾವಿರ । ನಾಡಿಗತ ದೇವತೆಗಳೊಳಗಿ ।
ದ್ದಾಡುತಾನಂದಾತ್ಮ ಚರಿಸುವ ಲೋಕದೊಳು ತಾನು ॥ ॥೦೪-೦೨॥

ವಾರಿವಾಚ್ಯನು ವಾರಿಯೊಳಗಿ।ದ್ದಾರು ರಸವೆಂದೆನಿಸಿ ಮೂವ ।
ತ್ತಾರು ಸಾವಿರ ಸ್ತ್ರೀಪುರುಷನಾಡಿಯೊಳು ತದ್ರೂಪ ॥
ಧಾರಕನು ತಾನಾಗಿ ಸರ್ವಶ।ರೀರಗಳಲಿ ಅಹಶ್ಚರಾತ್ರಿ ವಿ ।
ಹಾರ ಮಾಳ್ಪನು ಬೃಹತಿಯೆಂಬ ಸುನಾಮದಿಂ ಕರೆಸಿ ॥ ॥೦೪-೦೩॥

ಆರು ರಸ ಸತ್ವಾದಿ ಭೇದದಿ । ಆರು ಮೂರಾಗಿಹವು ಸಾರಾ ।
ಸಾರ ನೀತಾನೀತ ಖಂಡಾಖಂಡ  ಚಿತ್ರಚುರ ॥
ಈರಧಿಕ ಎಪ್ಪತ್ತು ಸಾವಿರ । ಮಾರಮಣನ ರಸಾಖ್ಯರೂಪ ಶ ।
ರೀರದಲಿ ಭೋಜ್ಯ ಸುಪದಾರ್ಥದಿ ತಿಳಿದು ಭುಂಜಿಪುದು ॥೦೪-೦೪॥

ಕ್ಷೀರಗತ ರಸರೂಪಗಳು ಮು।ನ್ನೂರು ಮೇಲೈವತ್ತುನಾಲಕು ।
ಚಾರು ಘೃತಗತರೂಪಗಳು ಇಪ್ಪತ್ತರೊಂಭತ್ತು ॥
ಸಾರ ಗುಡ ದೊಳಗೈದು ಸಾವಿರ । ನೂರವೊಂದು ಸುರೂಪ ದ್ವಿಸಹ ।
ಸ್ರಾರೆರಡು ಶತ ಪಂಚವಿಂಶತಿ ರೂಪ ಫಲಗಳಲಿ ॥ ॥೦೪-೦೫॥

ವಿಶದ ಸ್ಥಿರ ತೀಕ್ಷ್ಣವು ನಿರಹರ।ರಸ ಗಳೊಳು ಮೂರೈದು ಸಾವಿರ ।
ತ್ರಿಶತನವ ರೂಪಗಳ ಚಿಂತಿಸಿ ಭುಂಜಿಪುದು ವಿಷಯ ॥
ಶ್ವಸನ ತತ್ತ್ವೇಶ ರೊಳಗಿದ್ದೀ।ಪೆಸರಿನಿಂದಲಿ ಕರೆಸುವನು ಧೇ ।
ನಿಸಿದರೀ ಪರಿ ಮನಕೆ ಪೊಳೆವನು ಬಲ್ಲ ವಿಬುಧರಿಗೆ ॥ ॥೦೪-೦೬॥

ಕಪಿಲ ನರಹರಿ ಭಾರ್ಗವತ್ರಯ । ವಪುಷನೇತ್ರದಿ ನಾಸಿಕಾಸ್ಯದಿ ।
ಶಫರನಾಮಕ ಜಿಹ್ವೆಯಲಿ ದಂತದಲಿ ಹಂಸಾಖ್ಯ ॥
ತ್ರಿಪದಿಪಾದ್ಯಹಯಾಸ್ಯ ವಾಚ್ಯದೊ।ಳಪರಿಮಿತ ಸುಖಪೂರ್ಣ ಸಂತತ ।
ಕೃಪಣರೊಳಗಿದ್ದವರವರ ರಸ ಸ್ವೀಕರಿಸಿ ಕೊಡುವ ॥ ॥೦೪-೦೭॥

ನಿರುಪಮಾನಂದಾತ್ಮ ಹರಿ ಸಂ।ಕರುಷಣ ಪ್ರದ್ಯುಮ್ನ ರೂಪದಿ ।
ಇರುತಿಹನು ಭೊಕ್ತೃಗಳೊಳಗೇ ತಚ್ಛಕ್ತಿದನು ಯೆನಿಸಿ ॥
ಕರೆಸುವನು ನಾರಾಯಣನಿರು।ದ್ಧೇರಡುನಾಮದಿ ಭೋಜ್ಯವಸ್ತುಗ ।
ನಿರುತ ತರ್ಪಕನಾಗಿ ತೃಪ್ತಿಯನೀವ ಚೇತನಕೆ ॥ ॥೦೪-೦೮॥

ವಾಸುದೇವನು ಒಳಹೊರಗೆ ಅವ।ಕಾಶ ಕೊಡುವ ನಭಸ್ಥನಾಗಿ ರ ।
ಮಾಸಮೇತ ವಿಹಾರ ಮಾಳ್ಪನು ಪಂಚರೂಪದಲಿ ॥
ಆ ಸರೋರುಹಸಂಭವಾಭವ।ವಾಸವಾದ್ಯಮರಾದಿಚೇತನ ।
ರಾಶಿಯೊಳಗಿಹನೆಂದು ಅರಿತವನವನೆ ಕೋವಿದನು ॥ ॥೦೪-೦೯॥

ವಾಸುದೇವನು ಅನ್ನದೊಳು ನಾ।ನಾ ಸುಭಕ್ಷ್ಯದಿ ಸಂಕರುಷಣ ಕೃ ।
ತೀಶ ಪರಮಾನ್ನದೊಳು ಘೃತದೊಳಗಿಪ್ಪನನಿರುದ್ಧ ॥
ಆ ಸುಪರ್ಣಾಂಸಗನು ಸೂಪದಿ।ವಾಸವಾನುಜ ಶಾಕದೋಳು ಮೂ ।
ಲೇಶ ನಾರಾಯಣನು ಸರ್ವತ್ರದಲಿ ನೆಲೆಸಿಹನು ॥ ॥೦೪-೧೦॥

ಅಗಣಿತಾತ್ಮ ಸುಭೋಜನ ಪದಾ।ರ್ಥಗಳ ಓಳಗೆ ಅಖಂಡವಾದೊಂ ।
ದಗಳಿನೊಳನಂತಾಂಶದಿಂದಲಿ ಖಂಡನೆಂದಿನಿಸಿ ॥
ಜಗದಿ ಜೀವರ ತೃಪ್ತಿ ಪಡಿಸುವ।ಸ್ವಗತ ಭೇದವಿವರ್ಜಿತನ ಈ ।
ರ್ಬಗೆಯ ರೂಪನರಿತು ಭುಂಜಿಸಿ ಅರ್ಪಿಸವನಡಿಗೇ ॥ ॥೦೪-೧೧॥

ಈ ಪರಿಯಲರಿತುಂಬ ನರ ನಿ।ತ್ಯೋಪವಾಸಿ ನಿರಾಮಯನು ನಿ ।
ಷ್ಪಾಪಿ ನಿತ್ಯ ಮಹತ್ಸುಯಜ್ಞಗಳಾಚರಿಸಿದವನು ॥
ಪೊಪುದಿಪ್ಪುದು ಬಪ್ಪುದೆಲ್ಲ ರ।ಮಾಪತಿಗಧಿಷ್ಠಾನವೆನ್ನು ಕೃ ।
ಪಾಪಯೋನಿಧಿ ಮಾತನಾಲಿಸುತಿಹ ಜನನಿಯಂತೇ ॥ ॥೦೪-೧೨॥

ಆರೆರಡು ಸಾವಿರದ ಮೆಲಿ।ನ್ನೂರ ಐವತ್ತೊಂದು ರೂಪದದಿ ।
ಸಾರಭೋಕ್ತನಿರುದ್ಧದೇವನು ಅನ್ನಮಯನೆನಿಪ ॥
ಮೂರೆರಡುವರೆಸಾವಿರದ ಮೇಲ್।ಮೂರಧಿಕ ನಾಲ್ವತ್ತು ರೂಪದಿ ।
ತೋರುತಿಹ ಪ್ರದ್ಯುಮ್ನ ಜಗದೋಳು ಪ್ರಾಣಮಯನಾಗಿ ॥ ॥೦೪-೧೩॥

ಎರಡು ಕೋಶದ ಒಳಹೊರಗೆ ಸಂ।ಕರುಷಣೈದು ಸುಲಕ್ಷದರವ ।
ತ್ತೆರಡುಸಾವಿರದೇಳಧಿಕ ಶತರೂಪಗಳ ಧರಿಸಿ ॥
ಕರೆಸಿ ಕೊಂಬ ಮನೋಮಯನು ಎಂ।ದರವಿದೂರನು ಈರೆರಡು ಸಾ ।
ವಿರದ ಮುನ್ನೂರಾದ ಮೆಲ್ನಾಲ್ಕಧಿಕ ಎಪ್ಪತ್ತು ॥ ॥೦೪-೧೪॥

ರೂಪದಿಂ ವಿಜ್ಞಾನಮಯನೆಂ।ಬೀ ಪೇಸರಿನಿಮ್ ವಾಸುದೆವನು ।
ವ್ಯಾಪಿಸಿಹ ಮಹದಾದಿತತ್ವವ ತತ್ಪತಿ ಗಳೊಳಗೆ ॥
ಈ ಪುರುಷ ನಾಮಕನ ಶುಭಸ್ವೇ।ದಾಪಳೆನಿಸಿ ರಮಾಂಬ ತಾ ಬ್ರ ।
ಹ್ಮಾಪರೋಕ್ಷಿಗಳಾದವರ ಲಿಂಗಾಂಗ ಕೆಡಿಸುವಳು ॥ ॥೦೪-೧೫॥

ಐದುಸಾವಿರನೂರ ಇಪ್ಪ।ತ್ತೈದು ನಾರಾಯಣನ ರೂಪವ ।
ತಾ ಧರಿಸಿಕೊಂಡನುದಿನದಿ ಆನಂದಮಯ ನೆನಿಪ ॥
ಐದು ಲಕ್ಷದ ಮೇಲೆ ಎಂಭ।ತ್ತೈದು ಸಾವಿರ ನಾಲ್ಕು ಶತಗಳ ।
ಐದು ಕೋಶಾತ್ಮಕ ವಿರಿಂಚಾಂಡದೊಳು ತುಂಬಿಹನು ॥ ॥೦೪-೧೬॥

ನೂರವೊಂದು ಸುರೂಪದಿಂ ಶಾಂ।ತೀರಮಣ ತಾನನ್ನನೆನಿಪ್ಪೆ ।
ನೂರ ಮೇಲ್ಮೂರಧಿಕದಶ ಪ್ರಾಣಾಖ್ಯ ಪ್ರದ್ಯುಮ್ನ ॥
ತೋರುತಿಹನೈವತ್ತು ಐದು ವಿ।ಕಾರ ಮನದೊಳು ಸಂಕರುಷಣೈ ।
ನೂರು ಚತುರಾಶೀತಿ ವಿಜ್ಞಾನಾತ್ಮ ವಿಶ್ವಾಖ್ಯ ॥ ॥೦೪-೧೭॥

ಮೂರು ಸಾವಿರದರ್ಧಶತ ಮೇ।ಲೀರಧಿಕ ರೂಪಗಳ ಧರಿಸಿ ಶ ।
ರೀರದೊಳಗಾನಂದಮಯ ನಾರಾಯಣಾಹ್ವಯನು ॥
ಈರೇರಡು ಸಾವಿರದ ಮೆಲ್ಮು।ನ್ನೂರ ಐದು ಸುರೂಪದಿಂದಲಿ ।
ಭಾರತೀಶನೊಳಿಪ್ಪ ನವನೀತಸ್ಥ ಘೃತದಂತೆ ॥ ॥೦೪-೧೮॥

ಮೂರಧಿಕಐವತ್ತು ಪ್ರಾಣ ಶ।ರೀರದೊಳಗನಿರುದ್ಧನಿಪ್ಪೆ ।
ನೂರು ಹನ್ನೊಂದಧಿಕಪಾನನೊಳಿಪ್ಪ ಪ್ರದ್ಯುಮ್ನ ॥
ಮೂರನೇ ವ್ಯಾನೋದೊಳಗೈದರೆ।ನೂರು ರೂಪದಿ ಸಂಕರುಷಣೈ ।
ನೂರ ಮೂವತ್ತೈದುದಾನನೋಳಿಪ್ಪ ಮಾಯೇಶ ॥ ॥೦೪-೧೯॥

ಮೂಲ ನಾರಾಯಣನು ಐವ।ತ್ತೇಳಧಿಕ ಐನೂರು ರೂಪವ ।
ತಾಳಿ ಸರ್ವತ್ರದಿ ಸಮಾನನೊಳಿಪ್ಪ ಸರ್ವೇಶ ॥
ಲೀಲೇಗೈವನು ಸಾವಿರದ ಮೆ।ಲೇಳು ನೂರ್ಹನ್ನೊಂದು ರೂಪವ ।
ತಾಳಿ ಪಂಚಪ್ರಾಣರೊಳು ಲೋಕಗಳ ಸಲಹುವನು ॥ ॥೦೪-೨೦॥

ತ್ರಿನವತಿ ಸ್ವರೂಪಾತ್ಮಕನಿರು।ದ್ಧನು ಸದಾ ಯಜಮಾನನಾಗಿ ।
ದ್ದನಲ ಯಮ ಸೋಮಾದಿ ಪಿತೃದೇವತೆಗಳಿಗೆ ಅನ್ನ ॥
ನೆನಿಪನಾ ಪ್ರದ್ಯುಮ್ನ ಸಂಕರು।ಷಣ ವಿಭಾಗವ ಮಾಡಿಕೊಂ ।
ಡುಣಿಪ ನಿತ್ಯಾನಂದಭೊಜನದಾಯಿ ತುರ್ಯಾಹ್ವ ॥ ॥೦೪-೨೧॥

ಷಣ್ಣವತಿನಾಮಕನು ವಸು ಮು।ಕ್ಕಣ್ಣ ಭಾಸ್ಕರರೊಳಗೆ ನಿಂತು ಪ್ರ ॥
ಪನ್ನರನುದಿನ ನಿಷ್ಕಪಟ ಸದ್ಭಕ್ತಿಯಲಿ ಮಾಳ್ಪ ॥
ಪುಣ್ಯ ಕರ್ಮವ ಸ್ವೀಕರಿಸಿ ಕಾ।ರುಣ್ಯ ಸಾಗರನಾ ಪಿತೃಗಳಿಗ ।
ಗಣ್ಯ ಸುಖವಿತ್ತವರ ಪೊರೆವನು ಎಲ್ಲ ಕಾಲದಲಿ ॥ ॥೦೪-೨೨॥

ಸುತಪನೇಕೋತ್ತರಸುಪಂಚಾ।ಶತವರಣ ಕರುಣದಿ ಚತುರ್ವಿಂ ।
ಶತಿಸುತತ್ವದಿ ಧಾತುಗಳೊಳಗಿಳಿದ್ದವಿರತನಿರುದ್ಧ ॥
ಜತನ ಮಾಳ್ಪನು ಜಗದಿ ಜೀವ।ಪ್ರತತಿಗಳ ಷಣ್ಣವತಿನಾಮಕ ।
ಚತುರಮೂರ್ತಿಗಳರ್ಚಿಸುವರದರಿಂದೆ ಬಲ್ಲವರು ॥ ॥೦೪-೨೩॥

ಅಂಬುಜಜಾಂಡೋದರನು ವಿಪಿನದಿ।ಶಬರಿಯೆಂಜಲನುಂಡು ಗೋಕುಲ ।
ದಬಲೆಯರನೊಲಿಸಿದನು ಋಷಿಪತ್ನಿಯರು ಕೊಟ್ಟನ್ನ ।
ಸುಭುಜ ತಾ ಭುಂಜಿಸಿದ ಸ್ವರಮಣ।ಕುಬುಜೆಗಂಧಕೆ ವಲಿದ ಮುನಿಗಣ ।
ವಿಬುಧಸೇವಿತ ಬಿಡುವನೇ ನಾವಿತ್ತ ಕರ್ಮಫಲ ॥ ॥೦೪-೨೪॥

ಗಣನೆಯಿಲ್ಲದ ಪರಮಸುಖ ಸ।ದ್ಗುಣಗಣಂಗಳ ಲೇಶಲೇಶಕೆ ।
ಎಣೆಯೆನಿಸದು ರಮಾಬ್ಜ ಭವಶಕ್ರಾದಿಗಳ ಸುಖವು ॥
ಉಣುತುಣುತ ಮೈಮರೆದು ಕೃಷ್ಣಾ।ರ್ಪಣವೆನಲು ಕೈಕೊಂಬನರ್ಭಕ ।
ಜನನಿ ಭೊಜನ ಸಮಯದಲಿ ಕೈಯೋಡ್ಡುವಂದದಲಿ ॥ ॥೦೪-೨೫॥

ಜೀವಕೃತ ಕರ್ಮಗಳ ಬಿಡದೆ ರ।ಮಾವರನು ಸ್ವೀಕರಿಸಿ ಫಲಗಳ ।
ನೀವನಧಿಕಾರಾನುಸಾರದಲವರಿಗನವರತ ॥
ಪಾವಕನು ಸರ್ವಸ್ವ ಭುಂಜಿಸಿ।ತಾ ವಿಕಾರವನೈದನೊಮ್ಮೆಗು ।
ಪಾವನಕೆ ಪಾವನನೆನಿಪ ಹರಿಯುಂಬುದೇನರಿದು ॥ ॥೦೪-೨೬॥

ಕಲುಷ ಜಿಹ್ವೆಗೆ ಸುಷ್ಠುಭೊಜನ । ಜಲ ಮೋದಲು ವಿಷದೋರುವುದು ನಿ ।
ಷ್ಕಲುಷ ಜಿಹ್ವೆಗೆ ಸುರಸ ತೋರುವುದೆಲ್ಲ ಕಾಲದಲಿ ॥
ಸುಲಲಿತಾಂಗಗೆ ಸಕಲ ರಸ ಮಂ।ಗಳವೆನಿಸಿತಿಹವನ್ನಮಯ ಕೈ ।
ಕೊಳದೆ ಬಿಡುವನೆ ಪೂತನಿಯ ವಿಷಮೊಲೆಯನುಂಡವನು ॥ ॥೦೪-೨೭॥

ಪೇಳಲೇನು ಸಮೀರದೇವನು । ಕಾಲಕೂಟವನುಂಡು ಲೋಕವ ।
ಪಾಲಿಸಿದ ತದ್ದಾಸನೋರ್ವನು ಅಮೃತನೆನಿಸಿದನು ॥
ಶ್ರೀ ಲಕುಮಿವಲ್ಲಭ ಶುಭಾಶುಭ । ಜಾಲಕರ್ಮಗಳುಂಬನುಪಚಯ ।
ದೇಳಿಗೆಗಳವಗಿಲ್ಲವೆಂದಿಗು ಸ್ವರಸಗಳ ಬಿಟ್ಟು ॥ ॥೦೪-೨೮॥

ಈ ಪರಿಯಲಚ್ಯುತನ ತತ್ತ।ದ್ರೂಪತನ್ನಾಮಗಳ ಸಲೆ ನಾ ।
ನಾ ಪದಾರ್ಥದಿ ನೆನೆನೆನೆದು ಭುಂಜಿ ಸುತಲಿರು ವಿಷಯ ॥
ಪ್ರಾಪಕ ಸ್ಥಾಪಕ ನಿಯಾಮಕ । ವ್ಯಾಪಕನು ಎಂದರಿದು ನೀ ನಿ ।
ರ್ಲೇಪನಾಗಿರು ಪುಣ್ಯ ಪಾಪಗಳರ್ಪಿಸವನಡಿಗೆ ॥ ॥೦೪-೨೯॥

ಐದು ಲಕ್ಷೆಂಭತ್ತರೊಂಭ।ತ್ತಾದ ಸಾವಿರದೇಳುನೂರರ ।
ಐದು ರೂಪವ ಧರಿಸಿ ಭೋಕ್ತೃಗ ಭೋಜ್ಯ ನೆಂದನಿಸಿ ॥
ಶ್ರೀಧರಾದುರ್ಗಾರಮಣ ಪಾ।ದಾದಿ ಶಿರಪರ್ಯಂತ ವ್ಯಾಪಿಸಿ ।
ಕಾದುಕೊಂಡಿಹ ಸಂತತ ಜಗನ್ನಾಥ ವಿಠ್ಠಲನು ॥ ॥೦೪-೩೦॥

oooooooooooooooooooooooooooooooooooooooooooo